# ಬೆಳ್ವೊಲನಾಡಿನ ರಾಷ್ಟ್ರಕೂಟರ ಕಾಲದ ಶಾಸನೋಕ್ತ ಜೈನ ಮುನಿಗಳು

**ಶರಣಪ್ಪ ಬಸಪ್ಪ ಜಗ್ಗಲ**

ಉಪನ್ಯಾಸಕರು, ಇತಿಹಾಸ ವಿಭಾಗ, ಕೆ.ಎಲ್.ಇ. ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಪದವಿ ಕಾಲೇಜು, ಹಾವೇರಿ.

**Received: 10-07-2024 ; Acepted: 10-08-2024 ; Published: 07-09-2024**

**DOI: https://doi.org/10.5281/zenodo.13725641**

**ABSTRACT:**

"ಪೂರ್ಣತ್ವ ಸಂಪಾದನೆ ಜೀವನದ ಗುರಿ. ಜೀವವು ಆತ್ಮವಿಕಾಸದ ಮಹಾ ಕಮ್ಮಟವೆನಿಸಿದುದು. ಪರಿಪೂರ್ಣದೆಡೆಗೆ ಸಾಗಲು ಜೈನಧರ್ಮ ಆನಂದಮಯವಾಗಿದೆ, ಆಶಾವಾದಿಯಾಗಿದೆ". ಇಲ್ಲಿ ಮನುಷ್ಯ ಸ್ವಪ್ರಯತ್ನದಿಂದ ಜೀವನವನ್ನು ಉತ್ತಮಗೊಳಿಸಿಕೊಂಡು, ಮಹೋನ್ನತವಾದುದನ್ನು ಸಾಧಿಸುತ್ತಾನೆ. ಇದೇ ಜೈನಧರ್ಮ ತತ್ವದಂತೆ ಕರ್ಮಬಂಧನಕ್ಕೊಳಗಾದ ಜೀವಾತ್ಮನು ಅನೇಕ ಭವಗಳನ್ನು ದಾಟುತ್ತ ಬಂದು, ಕರ್ಮಬಂಧವನ್ನು ಕಿತ್ತೊಗೆದು, ಭವಬಂಧನದಿಂದ ಮುಕ್ತಗೊಂಡು ಸಿದ್ದನಾಗುತ್ತಾನೆ. ತನ್ನಂತೆ ಇನ್ನುಳಿದ ಜೀವಾತ್ಮರೂ ಮುಕ್ತರಾಗಬೇಕೆಂಬ ಸದುದ್ದೇಶದಿಂದ ತಾನು ಕಂಡುಂಡ, ಅರಿತುಕೊಂಡ ಜ್ಞಾನದ ಹಿನ್ನೆಲೆಯಲ್ಲಿ ಈ ಜೀವಾಜೀವಗಳ ಸೃಷ್ಟಿ , ಸಂಸಾರದ ಕಲ್ಪನೆಯನ್ನು ಉಪದೇಶಿಸಿಸುವನು. ಜೀವಾತ್ಮನು ಬಯಸುವ ಅನಂತ ಸುಖವಾದ ಮುಕ್ತಿ ಪ್ರಾಪ್ತವಾಗಲು ಕಾಲಲಬ್ಧಿಗಿಂತ ಮೊದಲು ಸಮ್ಯಕ್ತ್ವಲಭಿಸಬೇಕು. ಜೀವನದಲ್ಲಿ ಸಮ್ಯಕ್ತ್ವಪ್ರಾಪ್ತಿ ತುಂಬ ಮಹತ್ವದ್ದು. ಸಮ್ಯಕ್ತ್ವವೆಂದರೆ ತತ್ವಪ್ರೀತಿ, ಸಮ್ಯಕ್ತ್ವವೆಂದರೆ ಆಧ್ಯಾತ್ಮದಲ್ಲಿ ಅಭಿರುಚಿ, ಸಮ್ಯಕ್ತ್ವವೆಂದರೆ ಆತ್ಮಶ್ರದ್ದೆ, ಈ ಶ್ರದ್ದೆ ವ್ಯವಹಾರ ಜೀವನದಲ್ಲಿ ಪ್ರಕಟವಾದರೆ, ಅಲೌಕಿಕ ಸುಖ ದೊರೆಯುತ್ತದೆ.

ಜೈನಧರ್ಮ ಇಂದಿಗೂ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಬರಲು ಬಹುಮುಖ್ಯ ಕಾರಣರು ಜಿನಮುನಿಗಳು. ಕಾಲಕಾಲಕ್ಕೆ ಈ ಧರ್ಮದ ಜನಸಾಂದ್ರತೆಯಲ್ಲಿ ಏರಿಳಿತ ಕಂಡರೂ; ಮುನಿಗಳು ಮಾತ್ರ ತಾವು ಆಚರಿಸುವ ಕಾಠಿಣ್ಯ ವ್ರತಗಳನ್ನು ಶಿಥಿಲಗೊಳಿಸಲಿಲ್ಲ. ಆದಿ ಕಾಲಕ್ಕಿದ್ದ ಮುನಿಯ ಸಿದ್ಧಾಂತಗಳೂ ಈಗಲೂ ಅಸ್ತಿತ್ವದಲ್ಲಿವೆ ಎಂದರೆ ಅದಕ್ಕೆ ಜಿನಮುನಿಗಳೇ ಕಾರಣರಾಗುತ್ತಾರೆ. ದೈಹಿಕ ಮತ್ತು ಮಾನಸಿಕ ದಿಗಂಬರತ್ವವನ್ನು ಪಾಲಿಸುವ ಇವರು ಅತೀ ಕ್ಲಿಷ್ಟವಾದ ನಿಯಮಗಳ ಮೂಲಕ ದೇಹವನ್ನು ದಂಡಿಸುತ್ತಾರೆ. ಅತ್ಯುಚ್ಚ 'ಕರ್ಮಸಿದ್ಧಾಂತ' ಪರಿಪಾಲನೆ ಇವರ ಗುರಿ. 'ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂ'ಗಳಲ್ಲಿ ಮುನಿಗಳು ಸಂಚರಿಸುತ್ತಾ, ಮಳೆಗಾಲದಲ್ಲಿ (ಚಾತುರ್ಮಾಸ) ಒಂದು ಕಡೆ ನೆಲೆ ನಿಲ್ಲುವರು. ಈ ಸಂದರ್ಭದಲ್ಲಿಯೇ ಮುನಿಗಳ ವಸತಿಗಾಗಿ ಕಟ್ಟಡಗಳು ನಿರ್ಮಾಣವಾದವು. ಮುಂದೆ ಇದೇ ವಸತಿ>ಬಸದಿಯಾಯ್ತು. ಬಸದಿಗೆ ಇನ್ನೊಂದು ಹೆಸರು ಚೈತ್ಯ. ಚೈತ್ಯವಾಸಿ ಮುನಿಪಂಗಡವು ಜೈನಧರ್ಮದಲ್ಲುಂಟು. ಚಾತುರ್ಮಾಸ ಸಂದರ್ಭದಲ್ಲಿ ಮುನಿಗಳು ಒಂದೇ ಕಡೆ ನೆಲೆ ನಿಲ್ಲುವುದರಿಂದ ಶ್ರಾವಕರ ಮೇಲೆ ಪ್ರಭಾವ ಬೀರಿ ಅವರು ಧಾರ್ಮಿಕ ಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಹುರಿದುಂಬಿಸಿದ್ದಾರೆ. ಇದೇ ಸಂದರ್ಭದಲ್ಲಿ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ ಪಂಚಾಣುವ್ರತಗಳನ್ನು ಶ್ರಾವಕರಿಗೆ ಬೋಧಿಸುತ್ತ ತಾವೂ ಅನುಸರಿಸುತ್ತಾ ಬಂದಿದ್ದಾರೆ. ಹೀಗೆ ಪಾರಮಾರ್ಥಿಕ ಕಾರ್ಯದ ಜೊತೆಜೊತೆಗೆ ಆಂತರಿಕ ಕಷಾಯಗಳನ್ನು ಕಳೆದುಕೊಂಡು ಸಮಾಧಿ ಮರಣದ

ಮೂಲಕ ಆತ್ಮವನ್ನು ಉದ್ಧಾರಗೊಳಿಸಿಕೊಳ್ಳುವ ಮುನಿಗಳ ನೂರಾರು ನಿದರ್ಶನಗಳು ಬೆಳ್ವೊಲನಾಡಿನಲ್ಲಿವೆ. ಮುಖ್ಯವಾಗಿ ಈ ನಾಡಿನಲ್ಲಿ ಆಳ್ವಿಕೆ ಮಾಡಿ ಜೈನಧರ್ಮಕ್ಕೆ ಅಪಾರವಾದ ಕೊಡುಗೆ ನೀಡಿರುವ ರಾಷ್ಟ್ರಕೂಟರ ಕಾಲ ಘಟ್ಟದ ಜೈನ ಮುನಿಗಳ ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

**KEYWORDS:**

ಬೆಳ್ವೊಲನಾಡು, ಜೈನ ಪರಂಪರೆ, ಮುನಿ ಪರಂಪರೆ, ರಾಷ್ಟ್ರಕೂಟರು, ಸಮಾಧಿ ಮರಣ.

## ಬೆಳ್ವೊಲನಾಡಿನ ರಾಷ್ಟ್ರಕೂಟರ ಕಾಲದ ಶಾಸನೋಕ್ತ ಜೈನ ಮುನಿಗಳು:

ಮುನಿದೀಕ್ಷೆಯನ್ನು ಪಡೆದವರು ಜೈನಾಗಮಗಳಲ್ಲಿ ಸೂಚಿಸಿರುವ ತತ್ವಾಚರಣೆಗಳನ್ನು ಶ್ರದ್ಧೆಯಿಂದ ಪಾಲಿಸುತ್ತ ಹಾಗೂ ಸಾಧನೆಯ ಹಾದಿಯಲ್ಲಿ ಎದುರಾಗುವ ಪರೀಷಹಗಳನ್ನು ತಾಳ್ಮೆಯಿಂದ ಸಹಿಸುತ್ತ ಮಹಾಮುನಿಗಳಾಗಿ ಧರ್ಮ ಪ್ರಸಾರದೊಂದಿಗೆ ಪ್ರಭಾವಶಾಲಿಗಳಾಗಿ ಸಮಾಜವನ್ನು ಜಾಗೃತಗೊಳಿಸಿ ಲೋಕವಂದಿತರಾಗಿದ್ದಾರೆ. ಬಹುಭಾಷಾಶಾಸ್ತ್ರ ವಿಶಾರದರು, ಉನ್ನತ ಮಟ್ಟದ ವ್ಯಾಕರಣಶಾಸ್ತ್ರಗಳಲ್ಲಿ ಪಾರಂಗತರು, ಶಬ್ದಾರ್ಥತತ್ಪರರು, ಉದ್ಯದ್ಗುಣಭೂಷಣರು, ತ್ರೈವಿಧ್ಯ ಚಕ್ರೇಶ್ವರರು, ಸಮ್ಯಕ್ತ್ವರತ್ನಾಕರರು, ಸ್ಯಾದ್ವಾದ ಸಿದ್ಧಾಂತದಲ್ಲಿ ಪ್ರವೀಣರು, ಕಠಿಣ ತಪೋಧನರು, ಉದಾತ್ತ ಆಚಾರ-ವಿಚಾರವಂತರು, ಜನಪರ ಚಿಂತನಕಾರರು, ಪರಧರ್ಮ ಸಹಿಷ್ಣುಗಾರರು, ಬಸದಿ-ಮಠಮಾನ್ಯಗಳ ಸ್ಥಾನಾಚಾರ್ಯರು ಆದ ಜೈನ ಮುನಿಗಳು ಜಂಗಮ ತೀರ್ಥಂರಾಗಿದ್ದರು. ಅಂದರೆ ನಡೆದಾಡುವ ತೀರ್ಥಂಕರರೆಂದು(ಚಲ್ತೆ ಫಿರ್ತೇ ಭಗವಾನ್) ಪ್ರಸಿದ್ಧರಾಗಿದ್ದರು.

**ಆರೋಹಸ್ವರಥೆ ಪಾರ್ಥ ಗಾಂಡೀವಂ ಚ ಕರೇ ಕುರು**
**ನಿರ್ಜಿತಾ ಮೇದಿನೀ ಮನ್ಯೇ ನಿರ್ಗ್ರಂಥೋ ಯಸ್ಯ ಸಮ್ಮುಖೇ||**

ಎಂಬಂತೆ ಜೈನ ಮುನಿಗಳ ದರ್ಶನದಿಂದ ಎಲ್ಲ ಕಷ್ಟಗಳೂ ದೂರವಾಗುವವು, ಪ್ರತಿಯೊಂದು ಕಾರ್ಯದಲ್ಲಿ ಯಶಸ್ಸು ಸಿಗುವುದು, ಎಂತಹ ಸ್ಪರ್ಧೆಯುದ್ಧಗಳಲ್ಲಿಯೂ ಗೆಲವು ನಿಶ್ಚಿತವಾಗುವುದು.[1] ತೀರ್ಥಂಕರರ ರೂಪದ ಮುನೀಂದ್ರರಿಗೆ ಆಹಾರದಾನವಿತ್ತವರಿಗೆ ಮೋಕ್ಷವೇ ರಕ್ಷಣೆಯ ದುರ್ಗವಾಗುವುದು.[2] ಹಾಗಾಗಿಯೇ ಕನ್ನಡನಾಡಿನಲ್ಲಿ ಜೈನ ಮುನಿಗಳು ವಿಶೇಷವಾಗಿ ಗೌರವಿಸಲ್ಪಟ್ಟು ಸಮ್ಮಾನಿತರಾಗಿದ್ದರು ಹಾಗೂ ಪೂಜಿತರಾಗಿದ್ದರು. ಈ ಪ್ರದೇಶದ ಮಣ್ಣಿನಲ್ಲಿ ಪ್ರಾಚೀನ ಕಾಲದಿಂದಲೂ ಜೈನಧರ್ಮದ ಪುನುರುಜ್ಜೀವನ ಮತ್ತು ಪ್ರಸಾರ ಕಾರ್ಯದಲ್ಲಿ ಬಹುಮುಖ್ಯವಾದ ಪಾತ್ರವಹಿಸಿರುವ ಮುನಿಗಳನ್ನು ಸೃಷ್ಟಿಸುವ ಅಭೂತಪೂರ್ವ ಶಕ್ತಿ ಅಡಗಿದೆ. ಈ ನಾಡು ಹಲವು ಮಹಾಮುನಿಗಳಿಗೆ, ಆಚಾರ್ಯರಿಗೆ, ಪಂಡಿತರಿಗೆ, ಕಂತಿಯರಿಗೆ ಹಾಗೂ ಶ್ರಾವಕ-ಶ್ರಾವಕಿಯರಿಗೆ ಜನ್ಮಕೊಟ್ಟಿದೆ. ಆ ಕಾರಣದಿಂದಲೇ ಈ ಪ್ರದೇಶದಲ್ಲಿ ನೂರಾರು ಮುನಿಗಳು ಮತ್ತು ಕಂತಿಯರು ಬದುಕಿ-ಬಾಳಿ ಈ ಪ್ರದೇಶವನ್ನು ಸಾಂಸ್ಕೃತಿಕವಾಗಿ

ಸಂಪದ್ಭರಿತವಾಗಿಸಿದ್ದಾರೆ. ಅವರ ವಿಶಿಷ್ಟವಾದ ಧರ್ಮಪ್ರಸಾರದಿಂದ ಜೈನಧರ್ಮವು ಈ ಪ್ರದೇಶದ ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿ ಬೆಳೆದುಬಂದಿದೆ. ಜೊತೆಗೆ ಈ ಪ್ರದೇಶದ ವಾಸ್ತು, ಶಿಲ್ಪ, ಸಂಸ್ಕೃತಿ, ಸಮಾಜ, ಇತಿಹಾಸ, ಧರ್ಮ, ಸಾಹಿತ್ಯ ಮೊದಲಾದ ಕ್ಷೇತ್ರಗಳನ್ನೂ ಶ್ರೀಮಂತವಾಗಿಸಿ, ಕನ್ನಡನಾಡಿನ ಇತಿಹಾಸದ ಪುಟದಲ್ಲಿ ಇದಕ್ಕೊಂದು ಮಹತ್ವವಾದ ಸ್ಥಾನವನ್ನೂ ಕಲ್ಪಿಸಿಕೊಟ್ಟಿದೆ. ವ್ಯಾಕರಣಕಾರನಾದ ಕೇಶಿರಾಜನು 'ಶಬ್ದಮಣಿದರ್ಪಣ'ದ(ಕ್ರಿ.ಶ. 1260) 178ನೆಯ ಸೂತ್ರದಲ್ಲಿ 'ಪೂರ್ವಪದವು ಕಾರಕವಾಗಿಯೂ ಪರಪದವು ಕ್ರಿಯೆಯಾಗಿಯೂ ಇದ್ದರೆ ಅದು ಕ್ರಿಯಾಸಮಾಸವೆನಿಸುತ್ತದೆ' ಎಂದು ಸೂಚಿಸುತ್ತ, ಅರಿಸಮಾಸ ನಿರ್ದೋಷಕ್ಕೆ ಕೊಟ್ಟಿರುವ ಉದಾಹರಣೆಯಲ್ಲಿ:

**ಸವಣಂ ಬಳಪಂಗೊಳೆ ಗಾಂ**
**ಡಿವಿ ಬಿಲ್ಗೊಳೆ ಬಲವಿರೋಧಿ ವಜ್ರಂಗೊಳೆ ದಾ**
**ನವರಿಪು ಚಕ್ರಂಗೊಳೆ ಕೌ**
**ರವಾರಿ ಗದೆಗೊಳೆ ಮೊಣರ್ಕೆಗಾವಂ ನಿಲ್ವಂ||**

"ಸವಣನು ತನ್ನ ಲೇಖನಿಯನ್ನೆತ್ತಿದೊಡನೆ ಯಾವ ವೀರನು ಅವನನ್ನು ಎದುರಿಸಬಲ್ಲವನಾಗಿದ್ದನು?" ಎಂದು ಬಣ್ಣಿಸಿದ್ದಾನೆ.[3] ಇದು ಜೈನ ಮುನಿಗಳ ವಿದ್ವತ್ತಿಗೆ ಉತ್ತಮ ನಿದರ್ಶನವಾಗಿದೆ. ಹಾಗಾಗಿಯೇ ಧರ್ಮನಿರಪೇಕ್ಷೆ ಭಾವನೆಯಿಂದ ಕನ್ನಡ ಭಾಷೆಯ ಸೇವೆಯನ್ನು ಯಾರಾದರೂ ಮಾಡಿದ್ದರೆ, ಆ ಕೀರ್ತಿ ಜ್ಞಾನ ಮತ್ತು ವಿವೇಕಪ್ರದವಾದ ಜೈನ ಮುನಿಗಳು ಹಾಗೂ ಕವಿಗಳಿಗೆ ಸಲ್ಲುತ್ತದೆ. ಜೈನ ಮುನಿಗಳು ಧರ್ಮ ಪ್ರಸರಣಕ್ಕೆ ಮತ್ತು ಸಾಹಿತ್ಯಿಕ ಚಟುವಟಿಕೆಗಳಿಗೆ ಅಪಾರವಾದ ಅಮೂಲ್ಯವಾದ ಕೊಡುಗೆಗಳನ್ನು ನೀಡಿ ಜೈನಧರ್ಮದ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದಾರೆ.

## ರಾಷ್ಟ್ರಕೂಟರ ಕಾಲದ ಜೈನ ಮುನಿಗಳು:

ಜೈನ ಮುನಿ ಪರಂಪರೆಗೆ ಬೆಳ್ವೊಲ ಪ್ರದೇಶವು ವಿಶೇಷವಾದ ಕೊಡುಗೆಗಳನ್ನು ಕೊಟ್ಟಿದೆ. ಸ್ವಪರ ಕಲ್ಯಾಣವನ್ನು ಬಯಸುವ ಜೈನ ಮುನಿಗಳು ಈ ಪರಂಪರೆಯ ಆಧಾರ ಸ್ತಂಭಗಳು. ಇವರು ಆತ್ಮ ಕಲ್ಯಾಣದೊಂದಿಗೆ ಸಮಾಜ ಮತ್ತು ಧರ್ಮ ಕಲ್ಯಾಣಗಳಂತಹ ಕಾರ್ಯಗಳಲ್ಲಿ ಪ್ರೋತ್ಸಾಹಕರಾಗಿ ಈ ಪರಂಪರೆಯ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಈ ನಾಡಿನಲ್ಲಿ 7ನೆಯ ಶತಮಾನದಿಂದ 14ನೆಯ ಶತಮಾನದವರೆಗಿನ ಕಾಲಾವಧಿಯಲ್ಲಿ ಅನೇಕ ಜೈನಮುನಿಗಳು ಪ್ರಸಾರ ಮತ್ತು ಪ್ರಸರಣದಂತಹ ಚಟುವಟಿಕೆಗಳಲ್ಲಿ ಭಾಗಿಯಾಗಿ ಜೈನಧರ್ಮದ ಶ್ರೇಯೋಭಿವೃದ್ಧಿಗೆ ಕಾರಣೀಕರ್ತರಾಗಿದ್ದಾರೆ. ಈ ಜೈನ ಮುನಿಗಳಲ್ಲಿ ಮೂಲ ಸಂಘದವರೂ, ಯಾಪನೀಯ ಸಂಘದವರೂ, ಗಣ, ಗಚ್ಛ, ಅನ್ವಯ ಇನ್ನೂ ಮುಂತಾದ ಸಂಘದವರನ್ನು ಕಾಣಬಹುದಾಗಿದೆ.

## ತ್ರಿಕಾಲಯೋಗಿಶ್ವರ ಮತ್ತು ದೇವೇಂದ್ರಮುನಿ:

ನರಗುಂದ ತಾಲೂಕಿನ ಕೊಣ್ಣೂರಿನ ಕ್ರಿ.ಶ. 860ರ ಶಾಸನದಲ್ಲಿ ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛ ಪರಂಪರೆಯ ತ್ರಿಕಾಲಯೋಗೀಶ್ವರನ ಶಿಷ್ಯನಾದ

ದೇವೇಂದ್ರಮುನಿಯ ಉಲ್ಲೇಖವಿದೆ.[4] ರಾಷ್ಟ್ರಕೂಟರ 1ನೆಯ ಅಮೋಘವರ್ಷನ (ಕ್ರಿ.ಶ. 814-878) ಆಳ್ವಿಕೆಯ ಕಾಲಾವಧಿಯಲ್ಲಿ ಬೆಳ್ವೊಲ-300 ಆಡಳಿತ ವಿಭಾಗದಲ್ಲಿನ `ಕೊಳನೂರು-30' ಉಪ ಆಡಳಿತ ಘಟಕದ ಕೇಂದ್ರಪಟ್ಟಣವಾಗಿತ್ತು. ಈ ವಿಭಾಗದ ಆಡಳಿತವನ್ನು ಚಲ್ಲಕೇತನರ ಬಂಕೇಯರಸನು (ಕ್ರಿ.ಶ. 830-873) ನೋಡಿಕೊಳ್ಳುತ್ತಿದ್ದನು. ಈತನು ಕೊಣ್ಣೂರದಲ್ಲಿ ಕ್ರಿ.ಶ. 860ರಲ್ಲಿ ಬಸದಿಯನ್ನು ನಿರ್ಮಿಸಿದ್ದಾನೆ. ಈತನ ವಿನಂತಿಯ ಮೇರೆಗೆ ಅಮೋಘವರ್ಷನು ಬಸದಿಯ ಜೀರ್ಣೋದ್ಧಾರ, ಪೂಜೆ-ಪುನಸ್ಕಾರಗಳಿಗೆ ದೇವೇಂದ್ರಮುನಿಯ ಸನ್ನಿಧಿಯಲ್ಲಿ ಹಲವು ಗ್ರಾಮಗಳನ್ನು ಭೂದಾನ ಮಾಡಿದ್ದಾನೆ.

**ಮೇಘಚಂದ್ರ ತ್ರೈವಿಧ್ಯ:**

ಮೂಲಸಂಘ ದೇಸಿಗಣ ಪುಸ್ತಕಗಚ್ಛ ಕೊಂಡಕುಂದಾನ್ವಯ ಪರಂಪರೆಯ ಮೇಘಚಂದ್ರ ತ್ರೈವಿಧ್ಯರ ಉಲ್ಲೇಖವನ್ನು ಕೊಣ್ಣೂರಿನ ಕ್ರಿ.ಶ. 860ರ ಶಾಸನದಲ್ಲಿ ನಿರೂಪಿಸಲಾಗಿದೆ.[5] ಪ್ರಸ್ತುತ ಶಾಸನವು ಮೇಘಚಂದ್ರ ತ್ರೈವಿಧ್ಯರನ್ನು ಸಿದ್ಧಾಂತ ಅಮೃತ, ತಾರ್ಕಿಕಾಮೃತ, ಶಬ್ದಾಮೃತ ಎಲ್ಲವನ್ನೂ ಹೊಂದಿದ ಯೋಗಿಗಳ ಚೂಡಾಮಣಿ, ಶ್ರೇಷ್ಠ ಗುಣಗಳೇ ಇವರಿಗೆ ಅಲಂಕಾರವೆಂದೂ, ಸಕಲಶಾಸ್ತ್ರ ಪಾರಂಗತ, ಜಗತ್ತಿನಲ್ಲಿ ಕೀರ್ತಿ ಗಳಿಸಿ ವೇದಾಧ್ಯಯನಗಳಲ್ಲಿ ವಿಖ್ಯಾತರಾದವರು, ವಜ್ರಪಾತಃ ಸೈದ್ಧಾಂತಿ ಎಂದು ಹೊಗಳಿದೆ.

**ವೀರನಂದಿ:**

ಕೊಣ್ಣೂರಿನ ಕ್ರಿ.ಶ. 860ರ ಶಾಸನದಲ್ಲಿ ಮೂಲಸಂಘ ದೇಸಿಗಣ ಪುಸ್ತಕಗಚ್ಛ ಕೊಂಡಕುಂದಾನ್ವಯ ಪರಂಪರೆಯ ಮೇಘಚಂದ್ರ ತ್ರೈವಿಧ್ಯ ಮುನಿಗಳ ಶಿಷ್ಯ ವೀರನಂದಿ ಮುನಿಯ ಉಲ್ಲೇಖವಿದೆ.[6] ಪ್ರಸ್ತುತ ಶಾಸನವು ಇವರನ್ನು ಸಿದ್ಧಾಂತ ಚೂಡಾಮಣಿ, ಲೋಕ ಚಿಂತಾಮಣಿ, ಅಪಾರ ಶಬ್ದಭಂಡಾರವುಳ್ಳವರೆಂದೂ, ಕಾವ್ಯ ಚೂಡಾಮಣಿ, ಧರ್ಮಜ್ಞಾನ ಪಾರಂಗತರು, ರತ್ನತ್ರಯಭೂಷಣ, ಮಾಣಿಕ್ಯ ಶಿರೋಮಣಿ, ಜೈನಶಾಸ್ತ್ರ-ಸಿದ್ಧಾಂತಗಳ ಚಕ್ರವರ್ತಿ, ಕೊಂಡಕುಂದಾನ್ವಯದ ಶಿರೋಮಣಿ, ಸಕಲ ಶಾಸ್ತ್ರಶಿರೋಮಣಿ, ಶಾರದೆಯ ಪುತ್ರ, ಶಾರದೆಯ ಪ್ರತಿರೂಪ ಹಾಗೂ ಕಾವ್ಯಜ್ಞ ಚೂಡಾಮಣಿ ಎಂದೆಲ್ಲ ವರ್ಣಿಸಿದೆ.

**ಧರ್ಮಸೇನ:**

ನಯಸೇನನು ತನ್ನ ಧರ್ಮಾಮೃತ ಕೃತಿಯಲ್ಲಿ ಗುರುಪರಂಪರೆಯಲ್ಲಿ ಮೊದಲಿಗೆ ಬರುವ ಯತಿ/ಮುನಿ ಧರ್ಮಸೇನನಿಂದ ನಯಸೇನನವರೆಗಿನ ಯತಿಗಳೆಲ್ಲರೂ ಸೇನಗಣಕ್ಕೆ ಸೇರಿದವರು ಎಂದು ಗುರುಪರಂಪರೆ ತಿಳಿಸುವಾಗ ಸ್ಪಷ್ಟಪಡಿಸಿದ್ದಾನೆ.[7] ಚಾವುಂಡರಾಯ ಪುರಾಣದಲ್ಲಿ "ಧವಳಯಶರ್.... ಚಂದ್ರಕವಾಟ ವಾಸದೋಳ್ ನೆಗಳ್ದೆ ಧರ್ಮಸೇನಾಚಾರ್ಯರ್" ಹೇಳಿಕೆ ಅನ್ವಯ ಸೇನಗಣಕ್ಕೆ ಸೇರಿದ ಚಂದ್ರಿಕವಾಟಾನ್ವಯ, ಚಂದ್ರಿಕಾವಾಟ ಸೇನಾನ್ವಯ ಎಂಬ ಹೆಸರಿನ ಯತಿ ಪರಂಪರೆಯೊಂದು ಕರ್ನಾಟಕದಲ್ಲಿತ್ತೆಂದು ತಿಳಿದುಬರುತ್ತದೆ. ಸುಮಾರು ಒಂಬತ್ತನೆಯ ಶತಮಾನದ ಪ್ರಥಮ ಭಾಗದಲ್ಲಿ ಧರ್ಮಸೇನನೆಂಬ ಜೈನಯತಿ ಚಂದ್ರಿಕವಾಟ ಎಂಬ ಸ್ಥಳದಲ್ಲಿ ಬಂದು ನೆಲೆಸಿರುವುದು ಸ್ಪಷ್ಟವಾಗುತ್ತದೆ.[8] ಮೂಲಸಂಘದ ಸೇನಗಣ ಪರಂಪರೆಯ

ಧರ್ಮಸೇನಮುನಿ ಚಂದ್ರಿಕವಾಟದಲ್ಲಿ ನೆಲೆಸಿದ್ದನು. ಹೀಗಾಗಿ ಆತನ ಶಿಷ್ಯ ಪರಂಪರೆ `ಚಂದ್ರಿಕವಾಟಾನ್ವಯ'ದವರು ಎಂತಲೇ ಪ್ರಸಿದ್ಧರಾಗಿದ್ದರು. ಚಂದ್ರಿಕವಾಟವು ಇಂದಿನ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಚಾಂದಕವಟೆ ಗ್ರಾಮವಾಗಿದೆ.

ಧರ್ಮಸೇನಮುನಿಯ ಶಿಷ್ಯ ಕುಮಾರಸೇನಮುನಿಯ ಕಾಲದಲ್ಲಿ ಚಂದ್ರಿಕವಾಟ ಪರಂಪರೆಯ ಮುನಿಗಳು ಮುಳಗುಂದಕ್ಕೆ ಆಗಮಿಸಿ, ಈ ಪರಿಸರದಲ್ಲಿ ಧರ್ಮಪ್ರಸಾರ ಕಾರ್ಯಗಳನ್ನು ಮುಂದುವರಿಸಿದರೆಂದು ವಿದ್ವಾಂಸರಾದ ಪಿ.ಬಿ. ದೇಸಾಯಿ ಅವರು ಅಭಿಪ್ರಾಯಪಟ್ಟಿದ್ದಾರೆ.[9] ಚಾವುಂಡರಾಯನು `ಚಾವುಂಡರಾಯ ಪುರಾಣ' ಕಾವ್ಯದಲ್ಲಿ (ಕ್ರಿ.ಶ. 978) ಮೂಲಸಂಘದ ಸೇನಗಣದ ಚಂದ್ರಿಕವಾಟ ಪರಂಪರೆಯ ಧರ್ಮಸೇನ, ಕುಮಾರಸೇನ, ನಾಗಸೇನ, ಚಂದ್ರಸೇನ, ಆರ್ಯನಂದಿ, ನಯಸೇನ, ಅಜಿತಸೇನ ಮುನಿಗಳನ್ನು ಗೌರವದಿಂದ ಸ್ಮರಿಸಿದ್ದಾನೆ.[10] ಹಂಪ ನಾಗರಾಜಯ್ಯ ಅವರು "ಮುಳಗುಂದದ ಜಿನೋನ್ನತಭವನ (ಬಸದಿ) ಚಂದ್ರಿಕವಾಟದ ಸೇನಗಣ ಪರಂಪರೆಗೆ ಸೇರಿತ್ತು. ಚಂದ್ರಪ್ರಭನಾಥ ಬಸದಿಯು ಚಂದ್ರಿಕಾವಾಟಾನ್ವಯ ಪರಂಪರೆಯವರ ಆರಾಧ್ಯದೈವವಾಗಿತ್ತು. ಅದಕ್ಕಾಗಿ ಇವರು ಚಂದ್ರಪ್ರಭನಾಥನ ಉಪದೇಶವನ್ನು ವೃದ್ಧಿಸಿ ಪ್ರಚಾರ ಮಾಡುವುದರಲ್ಲಿ ನಿರತರಾಗಿದ್ದರು"[11] ಎಂದು ಅಭಿಪ್ರಾಯಪಟ್ಟಿದ್ದಾರೆ.

**ಕುಮಾರಸೇನ:**

ಚಾವುಂಡರಾಯ ಪುರಾಣದ ಒಂದು ಪದ್ಯದಿಂದ ಕುಮಾರಸೇನನೆಂಬ ಮುನಿಪನು ಮುಳ್ಗುಂದದಲ್ಲಿ ಅಸಿಧಾರಾವ್ರತದಿಂದಿದ್ದು, ಆ ಮೇಲೆ ಕೊಪಾಣಾದ್ರೀಂದಕ್ಕೆ ಹೋಗಿ ಅಲ್ಲಿ ಅಶಮೋಕ್ತ ವಿಧಾನದಿಂದ ಮುಡುಪಿದ ವಿಷಯ ತಿಳಿದುಬರುತ್ತದೆ. ಮುಳುಗುಂದದಲ್ಲಿ ವ್ರತ ಹಿಡಿದ ಕುಮಾರಸೇನನು ಸೊಗಸು ಕಾಣದೇ ಕೊಪ್ಪಳಕ್ಕೆ ಹೋಗಿ ಸಮಾಧಿ ಮರಣವನ್ನಪ್ಪಿದನೆಂದು ತಿಳಿಸುತ್ತದೆ.[12] ಮುಳುಗುಂದದ[13] ಅತ್ಯಂತ ಪ್ರಾಚೀನ ಶಾಸನ ಕ್ರಿ.ಶ. 902-03ರ ರಾಷ್ಟ್ರಕೂಟರ ಅರಸ 2ನೆಯ ಕೃಷ್ಣನ ಶಾಸನದಲ್ಲಿ ಮತ್ತು ಕೊಪ್ಪಳದ[14] ಶಾಸನಗಳಲ್ಲಿ ಬರುವ ಚಂದ್ರಿಕಾವಾಟ ಸೇನಾನ್ವಯದ ಕುಮಾರಸೇನಾಚಾರ್ಯನು ಪ್ರಾಯಶಃ ಚಾವುಂಡರಾಯ ಪುರಾಣದಲ್ಲಿ ಬರುವ ಕುಮಾರಸೇನನನೇ ಆಗಿರಬೇಕು. ಈ ಮೂಲಕ ಮುಳುಗುಂದ ನಾಡಿನಲ್ಲಿ ಜೈನ ಪರಂಪರೆ ಬೆಳೆಯುವುದಕ್ಕೆ ಅಪಾರವಾದ ಕೊಡುಗೆಯನ್ನು ನೀಡಿರುವನು.

**ವೀರಸೇನ:**

ಮೂಲಸಂಘ ಸೇನಗಣ ಚಂದ್ರಿಕವಾಟಾನ್ವಯ ಪರಂಪರೆಯ ಕುಮಾರಸೇನ ಮುನಿಗಳ ಶಿಷ್ಯನಾದ ವೀರಸೇನನ ಉಲ್ಲೇಖವು ಕ್ರಿ.ಶ. 902ರ ಮುಳುಗುಂದದ ಶಾಸನದಲ್ಲಿ ಕಂಡುಬರುತ್ತದೆ. ಪ್ರಸ್ತುತ ಶಾಸನದಲ್ಲಿ:

**ಚನ್ದ್ರಿಕವಾಟ ಶೇನಾನ್ವಯದ**
**ನರನರಪತಿ ಯತಿಪತಿ ಪೂಜ್ಯಪಾದ ಕುಮಾರಸೇನಾಚಾರ್ಯ್ಯ**
**ಮೌಖ ವೀರಸೇನ ಮುನಿಪತಿ**
**ಶಿಷ್ಯ ಕನಕಸೇನಸೂರಿಮುಖ್ಯಾಯ ಕನ್ದವರ್ಮ್ಮಮಾಳಕ್ಷೇತ್ರೇ**

ಚಂದ್ರಿಕವಾಟ ಸೇನಾನ್ವಯದ ವೀರಸೇನ ಮುನಿಯ ಪ್ರಸ್ತಾಪವಿದೆ.[15] ಮುಳುಗುಂದಕ್ಕೆ ಸ್ಥಳಾಂತರವಾದ ಚಂದ್ರಿಕವಾಟ ಸೇನಾನ್ವಯದ ಮುಖ್ಯಸ್ಥರಾಗಿ ಕುಮಾರಸೇನರ ತರುವಾಯ ಜೈನ ಪರಂಪರೆಯನ್ನು ಈ ನಾಡಿನಲ್ಲಿ ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

**ಒಂದನೆಯ ಕನಕಸೇನ:**

ಮುಳುಗುಂದದ ಕ್ರಿ.ಶ. 920ರ ಶಾಸನದಲ್ಲಿ ಉಲ್ಲೇಖಿತ ವೀರಸೇನಮುನಿಯ ಶಿಷ್ಯ ಕನಕಸೇನಸೂರಿ ಮುನಿಯಾಗಿದ್ದಾನೆ. ಮುಳುಗುಂದದ ಮುನಿ ಪರಂಪರೆಯಲ್ಲಿ ಇಬ್ಬರು ಕನಕಸೇನರ ಉಲ್ಲೇಖ ಕಂಡುಬಂದಿರುವುದರಿಂದ ಪ್ರಸ್ತುತ ಕನಕಸೇನನನ್ನು ಮೊದಲನೆಯ ಕನಕಸೇನ ಎಂದು ಕರೆಯಲಾಗಿದೆ. "ವೀರಸೇನ ಮುನಿಪತಿಯ ಶಿಷ್ಯ ಕನಕಸೇನಸೂರಿ ಮುಖ್ಯಾಯ"[16] ಎಂದು ಹೇಳಿದೆ. ಈ ಕನಕಸೇನನು ಹಲವಾರು ಜಿನಪರ ಕೆಲಸಗಳಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ.

**ನಾಗಸೇನ ಪಂಡಿತ:**

ಸೂಡಿಯ ಕ್ರಿ.ಶ. 9-10ನೆಯ ಶತಮಾನದ ಕಾಲಘಟ್ಟದಲ್ಲಿ ರಚನೆಯಾದ ಈ ಶಾಸನದಲ್ಲಿ ನಾಗಸೇನ ಪಂಡಿತ ಎಂಬ ಜೈನ ಮುನಿಯ ಪ್ರಸ್ತಾಪವಿದೆ.[17] ಕಲ್ಯಾಣ ಚಕ್ರವರ್ತಿ ಜಯಸಿಂಹನ ಸಹೋದರಿಯಾದ ಅಕ್ಕಾದೇವಿಯು ಜಿನಮತ ಪರಿಪಾಲಿಸುತ್ತಿದ್ದುದ್ದನ್ನು ಈ ಶಾಸನ ತಿಳಿಸುತ್ತದೆ. ಈ ಮುನಿಗೆ ಅಕ್ಕಾದೇವಿಯು ಭೂಮಿ ದಾನ ನೀಡಿದ ಉಲ್ಲೇಖವಿದೆ. ಹೀಗೆ ನಾಗಸೇನ ಪಂಡಿತನು ಸೂಡಿ ಗ್ರಾಮದಲ್ಲಿಯ ಅಥವಾ ಅದರ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಬರುವ ಬಸದಿಯ ಆಚಾರ್ಯನಾಗಿದ್ದು, ಜೈನ ಪರಂಪರೆಯ ಪ್ರಸರಣಕ್ಕೆ ಶ್ರಮಿಸಿದ್ದಾನೆ.

**ಚಂದ್ರಪ್ರಭಾ ಭಟ್ಟಾರಕ:**

ಅಸುಂಡಿಯ ಕ್ರಿ.ಶ. 925ರ ಶಾಸನದಲ್ಲಿ ರಾಷ್ಟ್ರಕೂಟರ ನಾಲ್ಕನೆಯ ಗೋವಿಂದನ ಅಸುಂಡಿಯ ಶಾಸನದಲ್ಲಿ ಚಂದ್ರಪ್ರಭಾ ಭಟ್ಟಾರಕರ ಉಲ್ಲೇಖವಿದೆ.[18] ಬಂಕಾಪುರದ ಧೋರ ಜಿನಾಲಯದ ಆಚಾರ್ಯರಾಗಿದ್ದ ಚಂದ್ರಪ್ರಭಾ ಭಟ್ಟಾರಕರು ಈ ಪ್ರದೇಶದ ಆಳ್ವಿಕೆಯನ್ನು ನಡೆಸುತ್ತಿದ್ದರು. ಆಗ ಈ ಹಳ್ಳಿಯಲ್ಲಿ ನಾಗಯ್ಯನೆಂಬುವನ ಮುಖ್ಯಸ್ಥನ ಆಳ್ವಿಕೆಯಲ್ಲಿ ನಿರ್ಮಾಣವಾದ ದೇವಾಲಯಕ್ಕೆ ಭೂದಾನ ಮಾಡಿದ್ದನ್ನು ಈ ಶಾಸನದಿಂದ ತಿಳಿಯಬಹುದಾಗಿದೆ. ಹೀಗಾಗಿ ಜೈನ ಪರಂಪರೆಯು ಈ ಪ್ರದೇಶದಲ್ಲಿ ಬೆಳೆಯುವುದಕ್ಕೆ ಈ ಜೈನಮುನಿಯ ಕೊಡುಗೆಗಳು ಅಪಾರವಾಗಿವೆ. ಅಲ್ಲದೇ ಜೈನಮುನಿಗಳು ಕೂಡ ಆಳ್ವಿಕೆ ಮಾಡುತ್ತಿದ್ದರು ಎಂಬ ವಿಚಾರ ಈ ಶಾಸನದಿಂದ ಸ್ಪಷ್ಟವಾಗುತ್ತದೆ. ಮುನಿಯೊಬ್ಬನಿಗೆ ಒಂದು ತೆರಿಗೆರಹಿತ ಗ್ರಾಮ ದತ್ತಿಯಾಗಿ ದೊರಕಬೇಕಾದರೆ ರಾಜಸತ್ತೆಯಲ್ಲಿ ಆ ಮುನಿಗಿರುವ ಗೌರವ ಎಂಥದ್ದು ಎಂದು ಅರಿಯಬೇಕಾಗುತ್ತದೆ.

**ಆರ್ಯಸೇನ:**

ಚಾವುಂಡರಾಯ ಪುರಾಣದಲ್ಲಿ ಹಾಗೂ ನೇಮಿಚಂದ್ರನ ಸಿದ್ಧಾಂತ ಚಕ್ರವರ್ತಿ ರಚಿತ 'ಗೊಮ್ಮಟಸಾರ'ದಲ್ಲಿ ಅಜಿತಸೇನನ ಗುರು ಆರ್ಯಸೇನನೆಂದು ವಿಧಿತವಾಗುತ್ತದೆ (ಎ.ಎನ್. ಉಪಾಧ್ಯೆ ಅವರ ಪ್ರಕಾರ ಅಜಿತಸೇನನ ಗುರು ಆರ್ಯನಂದಿ). ಇವನು ಸೇನಗಣಕ್ಕೆ ಸೇರಿದವನಾಗಿರುವುದರಿಂದ ಅಲ್ಲಿ ಆರ್ಯನಂದಿಗೆ ಪ್ರತಿಯಾಗಿ ಆರ್ಯಸೇನ ಎಂದು ಉಲ್ಲೇಖಿತವಾಗಿರಬೇಕು. ಆದರೆ ಸೇನಗಣದ ಯತಿಗಳ ಹೆಸರಿನ ಕೊನೆಗೆ ಸೇನ ಶಬ್ದವೇ ಬರಬೇಕೆಂಬುದನ್ನು ಅಷ್ಟು ಖಚಿತವಾಗಿ ಪಾಲಿಸಿದಂತೆ ತೋರುವುದಿಲ್ಲ.[19] ಜೈನ ಮುನಿ ಪರಂಪರೆಯಲ್ಲಿ ಪ್ರಸಿದ್ಧವಾದ ಆರ್ಯಸೇನನು ಸಮಾಧಾನ ಹೊಂದಿದವನೂ, ನಿರ್ಮಲ ಮನಸ್ಸಿನವನೂ, ತತ್ವಶೀಲನಾಗಿದ್ದನು. ಜೈನ ಮಾರ್ಗದಲ್ಲಿ ನಡೆಯುವವನೂ, ಪವಿತ್ರವಾದ ಚರಿತ್ರೆ ಹೊಂದಿದವನೂ, ತಪೋನಿರತನೂ ಎಂಬ ಖ್ಯಾತಿಯನ್ನು ಹೊಂದಿದ್ದನು. ಈತನನ್ನು ಪುರಾಣಕಾರರು 'ಜಂಗಮ ತೀರ್ಥ'ನೆಂದು ಕರೆದಿರುವುದು ಗೌರವ ದ್ಯೋತಕವಾಗಿದೆ.[20] ಈ ಮುನಿಯು ಈ ನಾಡಿನ ಜೈನ ಪರಂಪರೆಯ ಬೆಳವಣಿಗೆ ಮತ್ತು ಪ್ರಸಾರಕ್ಕೆ ನೀಡಿದ ಕೊಡುಗೆಗಳು ಅಮೂಲ್ಯವಾಗಿವೆ.

**ಗುಣಚಂದ್ರ ಪಂಡಿತ:**

ರೋಣ ತಾಲೂಕಿನ ನರೇಗಲ್ಲು ಗ್ರಾಮದ ಕ್ರಿ.ಶ. 950ರ ಶಾಸನದಲ್ಲಿ ದೇಸಿಗಣದ ಕೊಂಡಕುಂದಾನ್ವಯ ಪರಂಪರೆಯ ಮಹೇಂದ್ರ ಪಂಡಿತರ ಶಿಷ್ಯನಾದ ವೀರನಂದಿ ಪಂಡಿತನ ಶಿಷ್ಯ ಗುಣಚಂದ್ರ ಪಂಡಿತರ ನಿರೂಪಣೆಯಿದೆ.[21] ಮೂರನೆಯ ಕೃಷ್ಣನ ಕಾಲದ ಪಾದಪದ್ಮೋಪಜೀವಿ ಗಂಗಕುಳತಿಳಕ ಭೂತಯ್ಯ ಪೆರ್ಮಾಡಿಯು ಗಂಗವಾಡಿಯನ್ನಾಳುತ್ತಿದ್ದಾಗ ಅವನ ಮನೋವಲ್ಲಭೆ ಪದ್ಮಬ್ಬರಸಿಯು ತಮ್ಮ ಬಸದಿಗೆ ಮತ್ತು ದಾನಸಾಲೆಗೆ ಗುಣಚಂದ್ರ ಪಂಡಿತರೆಂಬ ಜೈನಾಚಾರ್ಯರ ಪಾದಪೂಜೆ ಮಾಡಿ ಕೆರೆಯನ್ನು ದಾನ ನೀಡಿರುವುದನ್ನು ಈ ಶಾಸನ ಉಲ್ಲೇಖಿಸುತ್ತದೆ.

**ಭುವನನಂದ್ಯಾಚಾರ್ಯ ಮತ್ತು ಮಹೇಂದ್ರದೇವ ಭಟ್ಟಾರಕ:**

ಲಕ್ಷ್ಮೇಶ್ವರದ ಕ್ರಿ.ಶ. 968ರ ಶಾಸನದಲ್ಲಿ ದೇವಗಣ ಪರಂಪರೆಯ ಭುವನನಂದ್ಯಾಚಾರ್ಯ ಮತ್ತು ಶಿಷ್ಯ ಮಹೇಂದ್ರದೇವ ಭಟ್ಟಾರಕರ ಉಲ್ಲೇಖವಿದೆ.[22] ಕದಂಬರ ರವಿರಾಜನ(ರವಿವರ್ಮ) ಸಾಮಂತನೂ ಮತ್ತು ಆತನ ಪ್ರಿಯ ಮೈದುನನೂ ಆದ ಸೇಂದ್ರಕರ ಶಕ್ತಿವರ್ಮನು ಸೇಂದ್ರಕ ವಿಷಯವನ್ನು ಆಳುತ್ತಿದ್ದ ಸಂದರ್ಭದಲ್ಲಿ ರಾಜಗುರು ಭೂವನನಂದ್ಯಾಚಾರ್ಯನ ಸದ್ಧರ್ಮೋಪದೇಶದಿಂದ ಪ್ರೇರಿತನಾಗಿ ಕ್ರಿ.ಶ. 968ರಲ್ಲಿ ಅಣ್ಣಿಗೇರಿ ಪಟ್ಟಣದ ಪಾರ್ಶ್ವನಾಗಾರ್ಜುನ ಜಿನಾಲಯದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ದೇವಗಣ ಪರಂಪರೆಯ ಮಹೇಂದ್ರದೇವ ಭಟ್ಟಾರಕನ ಪಾದಗಳನ್ನು ತೊಳೆದು ಸರ್ವಬಾಧಾ ಪರಿಹಾರವಾಗಿ ಅಣ್ಣಿಗೇರಿ ಸಮೀಪದ ಹೆಬಸೂರು, ಶಿಶುವಿನಹಳ್ಳಿ, ಬಲ್ಲರವಾಡ, ಬಳ್ಳೂರು, ನಾಗರವಾಳು ಗ್ರಾಮಗಳಲ್ಲಿ ರಾಜಮಾನ ದಂಡದಿಂದ ಅಳೆದ ಪಂಚಶತ (ಐನೂರು) ನಿವರ್ತನ ಪ್ರಮಾಣದ ಎರೆ ಭೂಮಿಯನ್ನು ದಾನ ನೀಡಿದನೆಂಬ ನಿರೂಪಣೆಯಿದೆ.[23] ಇದರಿಂದ ಅಣ್ಣಿಗೇರಿ ಪಟ್ಟಣದಲ್ಲಿ ಕ್ರಿ.ಶ. ಸುಮಾರು 10ನೆಯ ಶತಮಾನದಲ್ಲಿ ಪಾರ್ಶ್ವನಾಗಾರ್ಜುನ ಹೆಸರಿನ ಬಸದಿಯಿದ್ದು, ಭೂವನನಂದ್ಯಾಚಾರ್ಯ

ಮತ್ತು ಮಹೇಂದ್ರದೇವ ಭಟ್ಟಾರಕರು ಆ ಬಸದಿಯ ಸ್ಥಾನಾಚಾರ್ಯರಾಗಿದ್ದರು ಎಂಬುದು ಮನದಟ್ಟಾಗುತ್ತದೆ.

**ಸಮಾರೋಪ:**

ಹೀಗೆ ರಾಷ್ಟ್ರಕೂಟರ ಕಾಲದ ಜೈನಮುನಿಗಳು ಬೆಳ್ವೊಲನಾಡಿನ ಜೈನ ಪರಂಪರೆಗೆ ಅಪಾರವಾದ ಕೊಡುಗೆಗಳನ್ನು ನೀಡಿದ್ದು ಅವರ ಧಾರ್ಮಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳಿಂದ ವೇದ್ಯವಾಗುತ್ತದೆ. ಮೂಲಸಂಘದ ಮುನಿಗಳು ಹೆಚ್ಚಾಗಿದ್ದು ತರುವಾಯ ಯಾಪನೀಯ ಮತ್ತು ಇನ್ನಿತರೆ ಸಂಘದ ಮುನಿಗಳೂ ಕಂಡುಬರುತ್ತಾರೆ. ದಿಗಂಬರ ಮತ್ತು ಶ್ವೇತಾಂಬರ ಪಂಗಡಗಳ ಮಧ್ಯದಲ್ಲಿಯ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲು ಯಾಪನೀಯ ಸಂಘವು ಹುಟ್ಟಿಕೊಂಡಿತು. ಈ ಪಂಗಡದ ಮುನಿಗಳು ನಿರ್ಗ್ರಂಥರಾಗಿಯೇ ಇರುತ್ತಿದ್ದರು. ಆದ್ದರಿಂದಲೇ ಈ ಪಂಥದ ಮುನಿಗಳು ಈ ನಾಡಿನಲ್ಲಿ ಹೇರಳವಾಗಿ ಕಂಡುಬರುತ್ತಾರೆ. ಒಟ್ಟಿನಲ್ಲಿ ತ್ಯಾಗ ಮತ್ತು ತಪಸ್ಸಿನ ಪ್ರತಿರೂಪವಾಗಿರುವ ಮುನಿಗಳ ಬಗ್ಗೆ, ಜೈನಧರ್ಮೀಯರಷ್ಟೇ ಅಲ್ಲ, ಎಲ್ಲ ಧರ್ಮೀಯರೂ ತಿಳಿದುಕೊಂಡಲ್ಲಿ ಪರಸ್ಪರ ಸಹನೆ, ಪ್ರೀತಿ ವಿಶ್ವಾಸದೊಂದಿಗೆ ಶಾಂತಿ ಸಾಮರಸ್ಯದ ಜೀವನ ಸಾಧ್ಯವಾಗಬಹುದು.

**ಕೊನೆ ಟಿಪ್ಪಣಿಗಳು:**


1. ಹಂಜೆ ಸಂಜಯ ಎನ್. (೨೦೧೬). ಗೋಕಾಕ ಪರಿಸರದಲ್ಲಿ ಜೈನಧರ್ಮ. ವಿದ್ಯಾಶ್ರೀ ಪ್ರಕಾಶನ. ಅಳಗವಾಡಿ. ಪು. ಸಂ. ೫೯
2. ಬ್ರಹ್ಮಪ್ಪ ಜಿ. (೧೯೬೨). ರತ್ನಾಕರನ ಶತಕ ಸಾಹಿತ್ಯ. ರತ್ನಾಕರ ಪ್ರಕಾಶನ. ಮೈಸೂರು. ಪು. ೭೪
3. ಶಾಮರಾಯ ತ. ಸು. (ಸಂ.). (೨೦೦೮). ಕೇಶಿರಾಜ ವಿರಚಿತ ಶಬ್ದಮಣಿ ದರ್ಪಣ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ. ಮೈಸೂರು. ಪು. ೨೦೭-೨೦೮
4. ಗಾಯಿ ಜಿ. ಎಸ್. (೧೯೮೮). ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್. ದಿ ಡೈರೆಕ್ಟರ್ ಜನರಲ್ ಆರ್ಕಿಯೋಲಜಿಕಲ್ ಸರ್ವೇ ಆಫ್ ಇಂಡಿಯಾ. ನ್ಯೂ ದೆಹಲಿ. ಸಂ. ೧೭. ಶಾ.ಸಂ. ೧೨
5. ಗಾಯಿ ಜಿ. ಎಸ್. (೧೯೮೮). ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್. ದಿ ಡೈರೆಕ್ಟರ್ ಜನರಲ್ ಆರ್ಕಿಯೋಲಜಿಕಲ್ ಸರ್ವೇ ಆಫ್ ಇಂಡಿಯಾ. ನ್ಯೂ ದೆಹಲಿ. ಸಂ. ೧೭. ಶಾ.ಸಂ. ೧೨
6. ಗಾಯಿ ಜಿ. ಎಸ್. (೧೯೮೮). ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್. ದಿ ಡೈರೆಕ್ಟರ್ ಜನರಲ್ ಆರ್ಕಿಯೋಲಜಿಕಲ್ ಸರ್ವೇ ಆಫ್ ಇಂಡಿಯಾ. ನ್ಯೂ ದೆಹಲಿ. ಸಂ. ೧೭. ಶಾ.ಸಂ. ೧೨
7. ಮಲ್ಲಾಪುರ ಬಿ. ವ್ಹಿ. (೧೯೭೮). ನಯಸೇನ ಮತ್ತು ಅವನ ಕೃತಿಗಳು. ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ. ಪು. ೬೩-೬೪
8. ಹಂಪ ನಾಗರಾಜಯ್ಯ. (೧೯೯೯). ಯಾಪನೀಯ ಸಂಘ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು. ೪೮
9. ದೇಸಾಯಿ ಪಿ. ಬಿ. ಚಂದ್ರಕವಾಟದ ಯತಿಗಳು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ. ಸಂ. ೫/೨, ಪು. ೨೫. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

10. ಹಾಜವಗೋಳ ಧನವಂತ. (೨೦೦೪). ಮುಳಗುಂದ ನಾಡು: ಒಂದು ಅಧ್ಯಯನ. ಮಹಾದೇವಿ ಪ್ರಕಾಶನ. ಧಾರವಾಡ. ಪು. ೨೨೮-೨೨೯
11. ಕಮಲಾ ಹಂಪನಾ ಮತ್ತು ಶೇಷಗಿರಿ ಆರ್. (ಸಂ.) (೧೯೮೩). ಚಾವುಂಡರಾಯ ವಿರಚಿತ ಚಾವುಂಡರಾಯ ಪುರಾಣಂ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪು.ಸಂ. ೧೪-೧೯, ಪು. ೫-೬
12. ಹಂಪ ನಾಗರಾಜಯ್ಯ. (೧೯೯೭). ಚಂದ್ರಕೊಡೆ (ಸಂಶೋಧನ ಲೇಖನಗಳ ಸಂಗ್ರಹ). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು. ૩૪-૩૬
13. ಕಮಲಾ ಹಂಪನಾ ಮತ್ತು ಶೇಷಗಿರಿ ಆರ್. (ಸಂ.). (೧೯೮೩). ಚಾವುಂಡರಾಯ ವಿರಚಿತ ಚಾವುಂಡರಾಯ ಪುರಾಣಂ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪು. ೧-೧೫
14. ಹಾಜವಗೋಳ ಧನವಂತ. (೨೦೦೪). ಮುಳಗುಂದ ನಾಡು: ಒಂದು ಅಧ್ಯಯನ. ಮಹಾದೇವಿ ಪ್ರಕಾಶನ. ಧಾರವಾಡ. ಮುಳುಗುಂದ ಶಾಸನ, ಕ್ರಿ.ಶ. ೯೦೨, ಪು. ೧೯೦-೧೯೪
15. ಹಂಪ ನಾಗರಾಜಯ್ಯ. (೧೯೯೮). ಕೊಪ್ಪಳ ಶಾಸನಗಳು. ರತ್ನತ್ರಯ ಪ್ರಕಾಶನ. ಮೈಸೂರು.
16. ಹಾಜವಗೋಳ ಧನವಂತ. (೨೦೦೪). ಮುಳಗುಂದ ನಾಡು: ಒಂದು ಅಧ್ಯಯನ. ಮಹಾದೇವಿ ಪ್ರಕಾಶನ. ಧಾರವಾಡ. ಪು.ಸಂ. ೧೯೦-೧೯೪
17. ಹಾಜವಗೋಳ ಧನವಂತ. (೨೦೦೪). ಮುಳಗುಂದ ನಾಡು: ಒಂದು ಅಧ್ಯಯನ. ಮಹಾದೇವಿ ಪ್ರಕಾಶನ. ಧಾರವಾಡ. ಪು.ಸಂ. ೧೯೦-೧೯೪
18. ಗಾಯಿ ಜಿ. ಎಸ್. (೧೯೮೮). ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್. ದಿ ಡೈರೆಕ್ಟರ್ ಜನರಲ್ ಆರ್ಕಿಯೋಲಜಿಕಲ್ ಸರ್ವೇ ಆಫ್ ಇಂಡಿಯಾ. ನ್ಯೂ ದೆಹಲಿ. ಸಂ. ೧೧ ಶಾ.ಸಂ. ೩೪
19. ಹಾಜವಗೋಳ ಧನವಂತ. (೨೦೦೪). ಮುಳಗುಂದ ನಾಡು: ಒಂದು ಅಧ್ಯಯನ. ಮಹಾದೇವಿ ಪ್ರಕಾಶನ. ಧಾರವಾಡ. ಪು.ಸಂ. ೨೩೧
20. ಕಮಲಾ ಹಂಪನಾ ಮತ್ತು ಶೇಷಗಿರಿ ಆರ್. (ಸಂ.). (೧೯೮೩). ಚಾವುಂಡರಾಯ ವಿರಚಿತ ಚಾವುಂಡರಾಯ ಪುರಾಣಂ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪದ್ಯ-೧೭, ಪು. ೫
21. ಗಾಯಿ ಜಿ. ಎಸ್. (೧೯೮೮). ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್. ದಿ ಡೈರೆಕ್ಟರ್ ಜನರಲ್ ಆರ್ಕಿಯೋಲಜಿಕಲ್ ಸರ್ವೇ ಆಫ್ ಇಂಡಿಯಾ. ನ್ಯೂ ದೆಹಲಿ. ಸಂ. ೧೧ ಶಾ.ಸಂ. ೩೮
22. ಗೋಗಿ ಹನುಮಾಕ್ಷಿ (ಸಂ.). (೨೦೧೫). ಲಕ್ಷ್ಮೇಶ್ವರ: ಸಾಂಸ್ಕೃತಿಕ ಅಧ್ಯಯನ. ಮಹಿಳಾ ಸಾಹಿತ್ಯಿಕಾ, ಹುಬ್ಬಳ್ಳಿ. ಶಾ.ಸಂ. ೧೭. ಪು. ೨೮-೩೦
23. ಗೋಗಿ ಹನುಮಾಕ್ಷಿ (ಸಂ.). (೨೦೧೫). ಲಕ್ಷ್ಮೇಶ್ವರ: ಸಾಂಸ್ಕೃತಿಕ ಅಧ್ಯಯನ. ಮಹಿಳಾ ಸಾಹಿತ್ಯಿಕಾ, ಹುಬ್ಬಳ್ಳಿ. ಪು.ಸಂ. ೨೯



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.